# ಸಾಹಿತ್ಯ ಮತ್ತು ಸಿನಿಮಾ ಕ್ಷೇತ್ರಗಳ ಕೊಂಡಿ ನಾಗತಿಹಳ್ಳಿ ಚಂದ್ರಶೇಖರ್

**ಶಿವಕುಮಾರ ಸಿ.***

**DOI: https://doi.org/10.5281/zenodo.22301768**

**ABSTRACT**

ಕನ್ನಡ ಸಾಹಿತ್ಯ ಮತ್ತು ಸಿನಿಮಾರಂಗದ ನಡುವೆ ಭದ್ರವಾದ ಸಾಂಸ್ಕೃತಿಕ ಸೇತುವೆ ನಿರ್ಮಿಸಿರುವ ನಾಗತಿಹಳ್ಳಿ ಚಂದ್ರಶೇಖರ್ ಅವರ ಬಹುಮುಖಿ ವ್ಯಕ್ತಿತ್ವ ಮತ್ತು ಸಾಧನೆಗಳನ್ನು ಇಲ್ಲಿ ಕಟ್ಟಿಕೊಡಲಾಗಿದೆ. ಕಥೆ, ಕಾದಂಬರಿ, ಅಂಕಣ ಹಾಗೂ ಪ್ರವಾಸ ಕಥನಗಳ ಮೂಲಕ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಇವರು, ಕಲಾತ್ಮಕ ಮತ್ತು ವಾಣಿಜ್ಯ ಚಿತ್ರಗಳ ನಡುವಿನ ಗೆರೆ ಅಳಿಸಿ ಸದಭಿರುಚಿಯ ನಿರ್ದೇಶಕರಾಗಿ ಜನಮನ್ನಣೆ ಗಳಿಸಿದ್ದಾರೆ. ಕೇವಲ ಕಲಾತ್ಮಕ ಸೃಜನಶೀಲತೆಗೆ ಮಾತ್ರ ಸೀಮಿತವಾಗದೆ, 'ಅಭಿವ್ಯಕ್ತಿ' ವೇದಿಕೆ ಹಾಗೂ 'ಟೆಂಟ್ ಸಿನಿಮಾ' ಮೂಲಕ ಹೊಸ ಪ್ರತಿಭೆಗಳನ್ನು ರೂಪಿಸುತ್ತಿದ್ದಾರೆ. ಕೀರ್ತಿಯ ಉತ್ತುಂಗದಲ್ಲಿದ್ದರೂ ತಮ್ಮ ಹುಟ್ಟೂರಿನಲ್ಲಿ 'ಸಂಸ್ಕೃತಿ ಹಬ್ಬ' ಆಯೋಜಿಸುವ ಮೂಲಕ ಗ್ರಾಮಮುಖಿ ಚಳವಳಿ, ಪರಿಸರ ಪ್ರಜ್ಞೆ ಹಾಗೂ ರೈತರ ಸ್ವಾವಲಂಬನೆಗೆ ಶ್ರಮಿಸುತ್ತಿದ್ದಾರೆ. ಎಷ್ಟೇ ಎತ್ತರಕ್ಕೆ ಬೆಳೆದರೂ ನೆಲದ ನಂಟನ್ನು ಬಿಡದ ಅವರ 'ಬೇರು-ರೆಕ್ಕೆ' ತತ್ವ ಹಾಗೂ ಸಮಾಜಮುಖಿ ಕಾರ್ಯಗಳು ಯುವ ಪೀಳಿಗೆಗೆ ಹೇಗೆ ದಿಕ್ಸೂಚಿಯಾಗಿವೆ ಎನ್ನುವುದನ್ನು ಸಮಗ್ರವಾಗಿ ವಿಶ್ಲೇಷಿಸಲಾಗಿದೆ.

**KEYWORDS:** ನಾಗತಿಹಳ್ಳಿ ಚಂದ್ರಶೇಖರ್, ಸಾಹಿತ್ಯ ಮತ್ತು ಸಿನಿಮಾ, ಸಂಸ್ಕೃತಿ ಹಬ್ಬ, ಬೇರು-ರೆಕ್ಕೆ ತತ್ವ, ಗ್ರಾಮಮುಖಿ ಚಳವಳಿ.

* **ಡಾ. ಶಿವಕುಮಾರ ಸಿ.,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕ್ಯಾತನಹಳ್ಳಿ, ಪಾಂಡವಪುರ, ಮಂಡ್ಯ.

ಕನ್ನಡ ಸಾಹಿತ್ಯ ಲೋಕ ಮತ್ತು ಚಲನಚಿತ್ರ ರಂಗ—ಇವೆರಡೂ ಭಿನ್ನ ಆಯಾಮಗಳ ಅಭಿವ್ಯಕ್ತಿ ಮಾಧ್ಯಮಗಳು. ಆದರೆ, ಇವೆರಡರ ನಡುವೆ ಅದ್ಭುತವಾದ ಸಾಂಸ್ಕೃತಿಕ ಹಾಗೂ ಬೌದ್ಧಿಕ ಸೇತುವೆಯನ್ನು ನಿರ್ಮಿಸಿದ ಅಪರೂಪದ ಕೀರ್ತಿ ನಾಗತಿಹಳ್ಳಿ ಚಂದ್ರಶೇಖರ್ ಅವರಿಗೆ ಸಲ್ಲುತ್ತದೆ. ಎಂಬತ್ತರ ದಶಕದಿಂದೀಚೆಗೆ ತಮ್ಮ ಅನನ್ಯ ಕಥೆ ಹಾಗೂ ಕಾದಂಬರಿಗಳ ಮೂಲಕ ಕನ್ನಡ ಸಾಹಿತ್ಯ ಜಗತ್ತಿನ ಗಮನ ಸೆಳೆದ ಇವರು, ಸಿನಿಮಾರಂಗದಲ್ಲಿ ಸದಭಿರುಚಿಯ ನಿರ್ದೇಶಕರಾಗಿ, ಚಿತ್ರಕಥೆಗಾರರಾಗಿ, ಸಂಭಾಷಣೆಕಾರರಾಗಿ ಹಾಗೂ ಜನಪ್ರಿಯ ಗೀತರಚನೆಕಾರರಾಗಿ ತಮ್ಮದೇ ಆದ ವಿಶಿಷ್ಟ ಛಾಪನ್ನು ಒತ್ತಿದ್ದಾರೆ.

ನಾಗತಿಹಳ್ಳಿಯವರ ಯಶಸ್ಸಿನ ಹಿಂದಿರುವುದು ಕೇವಲ ಸೌಭಾಗ್ಯವಲ್ಲ; ಬದಲಿಗೆ ಅಪಾರ ಪ್ರತಿಭೆ, ಕಠಿಣ ಪರಿಶ್ರಮ, ದೊಡ್ಡ ಕನಸುಗಳು ಹಾಗೂ ಬದುಕಿನ ಬಗೆಗಿನ ಪರಮ ಶ್ರದ್ಧೆ. ಕನ್ನಡ ಇಸ್ಕೂಲಿನಿಂದ ಹಳ್ಳಿಯ ಭಂಗ ಬವಣೆಗಳ ಮಡುವನ್ನು ಹಾಯ್ದು ಬಂದ ಇವರ ಹಿನ್ನೆಲೆ ರೋಮಾಂಚಕಾರಿಯಾಗಿದೆ. ಶಾಲೆಯ ದಿನಗಳಲ್ಲಿನ ಕಥನ ಕಟ್ಟುವ ಕಲೆ, ಸಂಜೆ ಕಾಲೇಜಿನ ಓದು, ದಿನಗೂಲಿ ದುಡಿಮೆ, ಹಗಲು ಓದು–ರಾತ್ರಿ ನೌಕರಿ, ನಿರುದ್ಯೋಗದ ಕಟು ದಿನಗಳು, ಅರೆಕಾಲಿಕ ಉಪನ್ಯಾಸಕ ವೃತ್ತಿ ಮತ್ತು ನಂತರದ ಸಿನಿಮಾ ಕಸುಬುದಾರಿಕೆ—ಹೀಗೆ ಬದುಕಿನ ಭಿನ್ನ ಹಾಗೂ ವಿಚಿತ್ರ ಅನುಭವಗಳ ತಲ್ಲಣಗಳನ್ನು ದಾಟಿ ಬಂದಿದ್ದರಿಂದಲೇ ಇವರ ಒಳನೋಟಗಳಿಗೆ ಇಷ್ಟೊಂದು ಗಟ್ಟಿತನ ಲಭಿಸಿದೆ. ಇಂದು ಇವರು ಕಥೆಗಾರರಾಗಿ, ಲೇಖಕರಾಗಿ, ಪ್ರಕಾಶಕರಾಗಿ, ಸಾಂಸ್ಕೃತಿಕ ಸಂಘಟಕರಾಗಿ ಮತ್ತು ಯಶಸ್ವಿ ಚಲನಚಿತ್ರ ನಿರ್ದೇಶಕರಾಗಿ ಎತ್ತರಕ್ಕೇರಿದ್ದರೂ ಸಹೃದಯ ಚಿಂತಕರಾಗಿ ನೆಲದ ಮೇಲೆಯೇ ನಿಂತಿದ್ದಾರೆ.

**ಸಾಹಿತ್ಯಿಕ ಕೊಡುಗೆಗಳು: ಸಾಮಾಜಿಕ ಚಿಕಿತ್ಸೆ ಮತ್ತು 'ಬೇರು–ರೆಕ್ಕೆ'ಗಳ ತತ್ವ**

ಸಾಹಿತ್ಯವೆಂಬುದು ನಾಗತಿಹಳ್ಳಿಯವರ ಪಾಲಿಗೆ ಕೇವಲ ಮನರಂಜನೆಯಲ್ಲ, ಅದು ಮನುಷ್ಯನ ಆಂತರ್ಯದ ಒಳದನಿ. "ಅದು ಮಗುವಿನ ಮೊದಲ ತೊದಲು ಮತ್ತು ಸಾವಿನಂಚಿನ ಕೊನೆಯ ಹೇಳಿಕೆ ಕೂಡ. ಅದು ಸ್ವಸ್ಥ ಸಮಾಜಾಪೇಕ್ಷಿ ಹಾಗೂ ಉತ್ತಮಿಕೆಗೆ ಹಂಬಲಿಸುವ ನಿರಂತರ ತಿದ್ದುಪಡಿ" ಎಂಬುದು ಇವರ ಅಚಲ ನಂಬಿಕೆ. ಎಂಥ ಬಿಕ್ಕಟ್ಟನ್ನೂ ಪಾರಾಗಿಸಬಲ್ಲ ಅಂತಃಪ್ರತಿಭೆ ಹಾಗೂ ಬದ್ಧತೆ ಸಾಹಿತ್ಯಕ್ಕಿದೆ ಎಂದು ನಂಬಿರುವ ಇವರು ಕನ್ನಡಕ್ಕೆ ನೀಡಿದ ಸಾಹಿತ್ಯಿಕ ಕೊಡುಗೆಗಳು ಅಪಾರ.

**ಕಥಾಲೋಕ ಮತ್ತು ಸಾಮಾಜಿಕ ಸಂಘರ್ಷ**

ಇವರು ಎಂಟು ಸಂಕಲನಗಳಲ್ಲಿ ಒಟ್ಟು ಎಂಬತ್ತೊಂಬತ್ತು (89) ಕಥೆಗಳನ್ನು ಪ್ರಕಟಿಸಿದ್ದಾರೆ. ಇವು ವೈವಿಧ್ಯಮಯ ಕಥಾವಸ್ತು ಹಾಗೂ ಭಿನ್ನ ನಿರೂಪಣಾ ವಿಧಾನದಿಂದ ಓದುಗರನ್ನು ಸೆಳೆಯುತ್ತವೆ. ಇವರ ಕಥೆಗಳಲ್ಲಿ ಮುಖ್ಯವಾಗಿ ಕಂಡುಬರುವ ವಿಷಯಗಳೆಂದರೆ:

- ಹಳ್ಳಿಗಳಿಂದ ನಗರಕ್ಕೆ ವಲಸೆ ಬಂದು ತಮ್ಮ ಅಸ್ತಿತ್ವಕ್ಕಾಗಿ ಪರಿತಪಿಸುವ ತರುಣರ ತಾಕಲಾಟ.
- ಗ್ರಾಮೀಣ ಬದುಕಿನಲ್ಲಿರುವ ಸಣ್ಣತನಗಳು ಮತ್ತು ಅದರೊಳಗೆಯೇ ಅಂತರ್ಗತವಾಗಿರುವ ಮಾನವೀಯ ಅಂತಃಕರಣ.
- ಜಾತಿಯ ಚೌಕಟ್ಟನ್ನು ಮೀರಲೆತ್ನಿಸುವ ಪ್ರೀತಿಯ ಸೋಲು-ಗೆಲುವುಗಳು.
- ಮೌಢ್ಯ ಬಿತ್ತುವ ಧಾರ್ಮಿಕ ಮುಖಂಡರ ಡಾಂಭಿಕತೆ ಮತ್ತು ಅಮಾಯಕರನ್ನು ವಂಚಿಸುವ ಸಮಾಜಘಾತಕ ಶಕ್ತಿಗಳ ಕ್ರೌರ್ಯ.

ಇಂತಹ ಸಾಮಾಜಿಕ ಸಂಘರ್ಷಗಳಿಗೆ ಅಕ್ಷರ ರೂಪದಲ್ಲಿ ಚಿಕಿತ್ಸೆ ನೀಡಲು ಪ್ರಯತ್ನಿಸಿರುವ ಇವರು, ತಮ್ಮ ನವಿರು ಪ್ರೇಮ ಕಥೆಗಳ ಮೂಲಕ ಸಮಕಾಲೀನ ತರುಣರಲ್ಲಿ ಹೊಸ ಕನಸುಗಳನ್ನು ಬಿತ್ತಿದ್ದಾರೆ.

**ಪ್ರಮುಖ ಕಾದಂಬರಿಗಳ ಆಳ-ಅಗಲ**

**ಬಾ ನಲ್ಲೆ ಮಧುಚಂದ್ರಿಕೆ:** ಪ್ರೀತಿಯ ಮಾಧುರ್ಯ ಹಾಗೂ ಅದು ಹುದುಗಿಸಿಕೊಂಡಿರುವ ಕ್ರೌರ್ಯದ ಅಪಾಯವನ್ನು ಈ ಕೃತಿ ತೆರೆದಿಡುತ್ತದೆ. ಮನುಷ್ಯನ ಆಂತರ್ಯದೊಳಗಿನ ಅವ್ಯಕ್ತ ಆಕಾಂಕ್ಷೆಗಳು, ಸಂಪತ್ತಿನ ಮೋಹ, ಅಧಿಕಾರ-ಅಂತಸ್ತಿನ ದಾಹ ಮತ್ತು ದೈಹಿಕ ಕಾಮನೆಗಳ ಸುಳಿಯಲ್ಲಿ ಸಿಲುಕಿ ಸುಂದರ ಬದುಕನ್ನು ನಾಶಮಾಡಿಕೊಳ್ಳುವ ಗಂಡು-ಹೆಣ್ಣಿನ ದುರಂತದ ರೋಚಕ ನಿರೂಪಣೆ ಇದರಲ್ಲಿದೆ. ಕೌತುಕ ಮತ್ತು ಪತ್ತೇದಾರಿ ಗುಣ ಹೊಂದಿರುವ ಈ ಕೃತಿ ಸಿನಿಮಾ ಆಗಿಯೂ ನೋಡುಗರ ಮೆಚ್ಚುಗೆ ಗಳಿಸಿದೆ.

**ಚುಕ್ಕಿ ಚಂದ್ರಮರ ನಾಡಿನಲ್ಲಿ:** ಭಾವನಾತ್ಮಕ ಜಗತ್ತು, ಕೌಟುಂಬಿಕ ದುರವಸ್ಥೆ ಹಾಗೂ ಹುಸಿ ಕ್ರಾಂತಿಕಾರಿಯ ಅವಕಾಶವಾದಿತನದ ನಡುವೆ ನಲುಗುವ ಹೆಣ್ಣಿನ ಜೀವನದ ಚಿತ್ರಣವನ್ನು ಇದು ಕಟ್ಟಿಕೊಡುತ್ತದೆ. ಭಾಷೆಯ ಸರಳತೆ ಹಾಗೂ ಬದುಕಿನ ಬಗೆಗಿನ ಉತ್ಕಟ ಪ್ರೀತಿಯಿಂದಾಗಿ ಇಷ್ಟವಾಗುವ ಈ ಕಾದಂಬರಿ ಕಿರುತೆರೆಯಲ್ಲಿ 'ಭಾಗ್ಯ' ಎಂಬ ಜನಪ್ರಿಯ ಧಾರಾವಾಹಿಯಾಗಿ ಪ್ರಸಾರಗೊಂಡಿದೆ.

**ವಲಸೆ ಹಕ್ಕಿಯ ಹಾಡು:** ಸ್ವಾತಂತ್ರ್ಯೋತ್ತರ ಭಾರತದಲ್ಲಿ ಗಾಂಧಿ ಮೌಲ್ಯಗಳು ಹೇಗೆ ಅಪಮೌಲ್ಯಗೊಳ್ಳುತ್ತಿವೆ ಎಂಬುದಕ್ಕೆ ಇದು ಕನ್ನಡಿ ಹಿಡಿಯುತ್ತದೆ. ಆಧುನಿಕತೆಯ ಸಿನಕತೆಯಲ್ಲಿ ಸಿಲುಕಿ, ಆದರ್ಶಗಳನ್ನು ಅವಸಾನಗೊಳಿಸುತ್ತಾ, ಹಣ ಮತ್ತು ಅಧಿಕಾರದ ಹಿಂದೆ ಓಡುತ್ತಿರುವ ಗ್ರಾಮೀಣ ಬದುಕನ್ನು 'ಕೆಂಚೇಗೌಡ'ನ ಕಥನದ ಮೂಲಕ ನಿರೂಪಿಸಲಾಗಿದೆ. ಈ ಕಾದಂಬರಿಯನ್ನು ಶ್ರೀ ಎಲ್. ಎನ್. ಮುಕುಂದರಾಜ್ ಅವರು ನಾಟಕಕ್ಕೆ ರೂಪಾಂತರಿಸಿದ್ದು, ಸಿ. ಜಿ. ಕೃಷ್ಣಸ್ವಾಮಿ (ಸಿಜಿಕೆ) ಅವರ ನಿರ್ದೇಶನದಲ್ಲಿ 'ಇಗೋ ಪಂಜರ ಅಗೋ ಮುಗಿಲು' ಹಾಗೂ ಮಾಲತೇಶ್ ಬಡಿಗೇರ್ ಅವರ ನಿರ್ದೇಶನದಲ್ಲಿ 'ನಮ್ಮೂರ ಗಾಂಧಿ' ಎಂಬ ನಾಟಕಗಳಾಗಿ

ರಾಜ್ಯಾದ್ಯಂತ ಯಶಸ್ವಿ ಪ್ರದರ್ಶನ ಕಂಡಿದೆ.

**ಪ್ರವಾಸ ಸಾಹಿತ್ಯ ಮತ್ತು ಅಂಕಣ ಬರಹಗಳ ವಿಶಿಷ್ಟ ನಡೆ**

ಆಧುನಿಕ ಕನ್ನಡ ಸಾಹಿತ್ಯದಲ್ಲಿ 'ಪ್ರವಾಸ ಕಥನ' ಕ್ಷೇತ್ರಕ್ಕೆ ನಾಗತಿಹಳ್ಳಿಯವರು ಭಿನ್ನ ಆಯಾಮ ನೀಡಿದ್ದಾರೆ. ಫ್ರಾನ್ಸ್, ಅಮೆರಿಕ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಈಜಿಪ್ಟ್, ನೇಪಾಳ ಮತ್ತು ಭಾರತದ ಸಿಕ್ಕಿಂ ರಾಜ್ಯದ ಕುರಿತು ಒಟ್ಟು ಆರು ಪ್ರವಾಸ ಕಥನಗಳನ್ನು ಪ್ರಕಟಿಸಿದ್ದಾರೆ. "ಬದುಕು ನಿಂತ ನೀರಾಗಬಾರದು, ವಿಧವಿಧ ಮಣ್ಣಿನಲ್ಲಿ ಸಾಗಿ ಲವಣ ಹೀರಬೇಕು, ಬಂಡೆಗಳ ಬಳಸಿ ಸಾಗಬೇಕು, ಕೊಳ್ಳ ಬಂದಾಗ ಧುಮುಕಬೇಕು. ಇಲ್ಲಿ ಹರಿಯುವುದೊಂದೇ ನಿರಂತರ ಕ್ರಿಯೆ" ಎನ್ನುವ ಧೋರಣೆ ಇವರದ್ದು. ನೆಲದ ನಂಟನ್ನಿಟ್ಟುಕೊಂಡೇ ಹಾರಬಯಸುವ, ಎಷ್ಟೇ ಎತ್ತರಕ್ಕೆ ಹಾರಿದರೂ ಭೂಸ್ಪರ್ಶಕ್ಕೆ ಕಾತರಿಸುವ ಇವರ 'ಬೇರು–ರೆಕ್ಕೆ'ಗಳ ಫಿಲಾಸಫಿ ಅತ್ಯಂತ ಪ್ರಸಿದ್ಧವಾದುದು.

ಇನ್ನು 'ಹಾಯ್ ಬೆಂಗಳೂರು' ಪತ್ರಿಕೆಯಲ್ಲಿ ಪ್ರಕಟವಾದ ಇವರ ಪತ್ರಾಂಕಣ ರೂಪದ ಆತ್ಮಕಥಾನಕ 'ನನ್ನ ಪ್ರೀತಿಯ ಹುಡುಗಿಗೆ' ಆರು ಸಂಪುಟಗಳಲ್ಲಿ ಪ್ರಕಟಗೊಂಡಿದೆ. ಪ್ರತಿವಾರ ಓದುಗರು ಕಾತರದಿಂದ ಕಾಯುವಂತೆ ಮಾಡಿದ ಈ ಪತ್ರಗಳು, ನಾಗತಿಹಳ್ಳಿಯವರ ವೈಯಕ್ತಿಕ ಬದುಕಿನ ಚಿತ್ರಣ ಮಾತ್ರವಲ್ಲದೆ ನಾಲ್ಕು ದಶಕಗಳ ಕರ್ನಾಟಕದ ಸಾಂಸ್ಕೃತಿಕ ಜಗತ್ತಿನ ಏಳು–ಬೀಳುಗಳ ಐತಿಹಾಸಿಕ ದಾಖಲೆಗಳಾಗಿವೆ. ಪಿ. ಲಂಕೇಶರ ಗರಡಿಯಲ್ಲಿ ಬೆಳೆದು, ಪ್ರೊ. ಎಂ. ಡಿ. ನಂಜುಂಡಸ್ವಾಮಿಯವರ ಒಡನಾಟದಲ್ಲಿ ರೈತ ಸಮುದಾಯದ ಉದ್ಧಾರ ಕುರಿತು ಕನಸು ಕಂಡು, ಚಳವಳಿಗಳು ಮಂಕಾದಾಗ ತಮ್ಮದೇ ಹಾದಿ ಹಿಡಿದ ಇವರ ಬರಹಗಳಲ್ಲಿ ಕನ್ನಡದ ಸಾಂಸ್ಕೃತಿಕ ಲೋಕದ ಅನೇಕ ಧೀಮಂತ ವ್ಯಕ್ತಿಚಿತ್ರಗಳು ಅನಾವರಣಗೊಂಡಿವೆ. ಇದೇ ಮಾದರಿಯಲ್ಲಿ ಇವರ 'ಹೊಳೆದಂಡೆ' ಅಂಕಣ ಬರಹಗಳು ಸಮಕಾಲೀನ ಸಂಗತಿಗಳಿಗೆ ಪ್ರತಿಸ್ಪಂದನವಾಗಿ ನಾಲ್ಕು ಸಂಪುಟಗಳಲ್ಲಿ ಬೆಳಕು ಕಂಡಿವೆ.

**ಪರಿಸರ ಚಳವಳಿ ಮತ್ತು ಸಂಪಾದಿತ ಕೃತಿಗಳು**

ಡಾ. ಶಿವರಾಮ ಕಾರಂತರೊಡನೆ ಕೈಗಾ ಪರಿಸರ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ನಾಗತಿಹಳ್ಳಿಯವರು, ಆ ಸಂದರ್ಭದಲ್ಲಿ ರಚಿಸಿದ ಪರಿಸರ ಗೀತೆಗಳು 'ಹಡೆದವ್ವ' ಶೀರ್ಷಿಕೆಯಲ್ಲಿ ಧ್ವನಿಸುರುಳಿಯಾಗಿ ಹೊರಬಂದು ಅಪಾರ ಜನಮನ್ನಣೆ ಗಳಿಸಿದವು. ಇದರಲ್ಲಿನ 'ಗಿಡ ನೆಡಿ, ಗಿಡ ನೆಡಿ' ಗೀತೆ ಇಂದಿಗೂ ಕರ್ನಾಟಕದ ಶಾಲಾ ಮಕ್ಕಳ ಬಾಯಲ್ಲಿ ಜನಪ್ರಿಯವಾಗಿದೆ. ಇದರೊಂದಿಗೆ 'ಶತಮಾನದಂಚಿನಲ್ಲಿ' (1999), 'ಕಾಲಾತೀತ' (2008) ಮತ್ತು 'ತರಳಬಾಳು ಹುಣ್ಣಿಮೆ' (2011) ಇವರು ಸಂಪಾದಿಸಿರುವ ಪ್ರಮುಖ ಕೃತಿಗಳಾಗಿವೆ. ಇವರ ಸಾಹಿತ್ಯದ ತೂಕವನ್ನು ಕಂಡು ಗುಲ್ಬರ್ಗದ ಅಮರ ಪ್ರಕಾಶನದಿಂದ 'ನಾಗತಿಹಳ್ಳಿ ಚಂದ್ರಶೇಖರ್ ಸಾಹಿತ್ಯ' (2006)

ವಿಮರ್ಶಾ ಕೃತಿ ಪ್ರಕಟವಾದರೆ, ಪುಷ್ಪ ನಾಗತಿಹಳ್ಳಿಯವರು ಬರೆದ 'ಚಂದಿರನೇತಕೆ ಓಡುವನಮ್ಮ' (2009) ಕೃತಿಯು ನಾಗತಿಹಳ್ಳಿಯವರ ಬದುಕಿನ ಹಲವು ಅಜ್ಞಾತ ವಿವರಗಳನ್ನು ಬಿಡಿಸಿಡುತ್ತದೆ.

**ಸಿನಿಮಾ ಮತ್ತು ಕಿರುತೆರೆ: ಬೆಳ್ಳಿಪರದೆಯ ಮೇಲೊಬ್ಬ 'ಮೇಷ್ಟ್ರು'**

1986ರಲ್ಲಿ 'ಕಾಡಿನ ಬೆಂಕಿ' ಚಿತ್ರಕ್ಕೆ ಚಿತ್ರಕಥೆ, ಸಂಭಾಷಣೆ ಹಾಗೂ ಗೀತ ಸಾಹಿತ್ಯ ರಚಿಸುವ ಮೂಲಕ ಸಿನಿಮಾ ರಂಗಕ್ಕೆ ಕಾಲಿರಿಸಿದ ನಾಗತಿಹಳ್ಳಿ ಚಂದ್ರಶೇಖರ್ ಅವರು ಮೂಲತಃ ಕನ್ನಡ ಅಧ್ಯಾಪಕರಾಗಿದ್ದವರು. ತದನಂತರ ಸಂಕ್ರಾಂತಿ, ಪ್ರಥಮ ಉಷಾ ಕಿರಣ, ಉದ್ಭವ ಚಿತ್ರಗಳಿಗೆ ಚಿತ್ರಕಥೆ ಮತ್ತು ಸಾಹಿತ್ಯ ರಚಿಸುವ ಮೂಲಕ ಚಿತ್ರರಂಗದ ಗಮನ ಸೆಳೆದರು. ಸಿನಿಮಾ ಮತ್ತು ಸಾಹಿತ್ಯದ ನಡುವೆ ಗಟ್ಟಿಯಾದ ಸೇತುವೆಯಂತೆ ಕೆಲಸ ಮಾಡುತ್ತಾ ಚಿತ್ರರಂಗದಲ್ಲಿ ಗೌರವಪೂರ್ವಕವಾಗಿ 'ಮೇಷ್ಟ್ರು' ಎಂದೇ ಗುರುತಿಸಿಕೊಂಡಿದ್ದಾರೆ. ಕಲಾತ್ಮಕ ಮತ್ತು ವಾಣಿಜ್ಯ ಚಿತ್ರಗಳ ನಡುವಿನ ಗೆರೆಯನ್ನು ಅಳಿಸಿ, ಸದಭಿರುಚಿಯ ಚಿತ್ರಗಳಿಂದ ಕನ್ನಡ ಸಿನಿಮಾ ಲೋಕಕ್ಕೆ ಹೊಸ ದಿಕ್ಸೂಚಿ ನೀಡಿದ ಇವರು, ತಮ್ಮ ಪ್ರತಿ ಚಿತ್ರದಲ್ಲೂ ಹೊಸ ಕಲಾವಿದರು ಹಾಗೂ ತಂತ್ರಜ್ಞರನ್ನು ಪರಿಚಯಿಸಿದ್ದಾರೆ.

**ಪ್ರಮುಖ ಚಿತ್ರಗಳ ಆಶಯ ಮತ್ತು ವಿಶ್ಲೇಷಣೆ**

**ಉಂಡು ಹೋದ ಕೊಂಡು ಹೋದ:** ಇವರು ನಿರ್ದೇಶಿಸಿದ ಮೊದಲ ಸಿನಿಮಾ ಇದಾಗಿದ್ದು, ಗ್ರಾಮ ಭಾರತದ ಕಥೆಯನ್ನು ಹಾಗೂ ನಿರುದ್ಯೋಗದಂತಹ ಗಂಭೀರ ಸಾಮಾಜಿಕ ಸಮಸ್ಯೆಯನ್ನು ನವಿರು ಹಾಸ್ಯದ ಹಿನ್ನೆಲೆಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ನಿರೂಪಿಸಿತು.

**ಸಂಸ್ಕೃತಿಗಳ ಸಂಘರ್ಷದ ತ್ರಿವಳಿ ಚಿತ್ರಗಳು:** 'ಅಮೇರಿಕಾ! ಅಮೇರಿಕಾ!!', 'ನನ್ನ ಪ್ರೀತಿಯ ಹುಡುಗಿ' ಮತ್ತು 'ಪ್ಯಾರಿಸ್ ಪ್ರಣಯ' ಚಿತ್ರಗಳಲ್ಲಿ ಪಾಶ್ಚಾತ್ಯ ಮತ್ತು ಭಾರತೀಯ ಬದುಕು ಹಾಗೂ ಸಂಸ್ಕೃತಿಯ ಬಗೆಗಿನ ಪೂರ್ವಾಗ್ರಹಗಳನ್ನು ಒಡೆಯುವ ವಸ್ತುಗಳನ್ನು ಸುಂದರ ಪ್ರೇಮಕಥೆಗಳೊಂದಿಗೆ ಸಮೀಕರಿಸಿ ಜಾಗತಿಕ ಮಟ್ಟದಲ್ಲಿ ಕನ್ನಡಿಗರನ್ನು ತಲುಪಿದರು.

**ಸಾಮಾಜಿಕ ಪ್ರಜ್ಞೆಯ ಚಿತ್ರಗಳು:** ಇವರ 'ಕೊಟ್ರೇಶಿ ಕನಸು' ದಲಿತರ ಬದುಕಿನ ನೋವು ಮತ್ತು ಶೈಕ್ಷಣಿಕ ಹಂಬಲವನ್ನು ಚಿತ್ರಿಸಿದರೆ, 'ಹೂ ಮಳೆ' ಈಶಾನ್ಯ ರಾಜ್ಯಗಳಲ್ಲಿನ ಭಯೋತ್ಪಾದನೆ ಹಾಗೂ ಗಡಿ ಸಮಸ್ಯೆಯನ್ನು ಚರ್ಚಿಸಿತು. 'ಅಮೃತಧಾರೆ' ದಾಂಪತ್ಯದ ಮಧುರ ಪ್ರೇಮವನ್ನು ಕಟ್ಟಿಕೊಟ್ಟರೆ, 'ಮಾತಾಡ್ ಮಾತಾಡ್ ಮಲ್ಲಿಗೆ' ಜಾಗತೀಕರಣದ ನಡುವೆ ಭಾರತದ ರೈತ ಅನುಭವಿಸುತ್ತಿರುವ ಪರಿಪಾಟಲು ಹಾಗೂ ಭೂಮಿಗಾಗಿ ನಡೆಸುವ ಹೋರಾಟವನ್ನು ತೀವ್ರವಾಗಿ ಚಿತ್ರಿಸಿತು. 'ಒಲವೇ ಜೀವನ ಲೆಕ್ಕಾಚಾರ' ಹುಸಿ ಕ್ರಾಂತಿಕಾರಿತನವನ್ನು ವಿಮರ್ಶಿಸಿದರೆ, 'ಬ್ರೇಕಿಂಗ್ ನ್ಯೂಸ್' ಇಂದಿನ ಮಾಧ್ಯಮಗಳ ವೈಖರಿಯನ್ನು ತೀವ್ರ ವಿಮರ್ಶೆಗೆ ಒಳಪಡಿಸಿತು.

‘ಇಷ್ಟಕಾಮ್ಯ’ ದಾಂಪತ್ಯ ಬದುಕಿನ ಮಧುರತೆಯನ್ನು ಸಾರಿದರೆ, ಅವರ ಮತ್ತೊಂದು ಚಿತ್ರ ಇಂಗ್ಲೆಂಡ್ ಮತ್ತು ಇಂಡಿಯಾ ಎರಡೂ ದೇಶಗಳ ಸಾಂಸ್ಕೃತಿಕ ಹಾಗೂ ರಾಜಕೀಯ ಸಂಬಂಧಗಳನ್ನು ಗಂಭೀರವಾಗಿ ಚರ್ಚಿಸಿತು. ಇವರು ಚಿತ್ರರಂಗಕ್ಕಾಗಿ ರಚಿಸಿರುವ ನೂರಕ್ಕೂ ಹೆಚ್ಚು ಚಿತ್ರಗೀತೆಗಳು ಇಂದಿಗೂ ತಮ್ಮ ಮಧುರತೆ ಹಾಗೂ ಗೇಯತೆಯಿಂದಾಗಿ ಜನಪ್ರಿಯವಾಗಿವೆ.

**ಕಿರುತೆರೆ**

ಕಿರುತೆರೆಯಲ್ಲೂ ನಾಗತಿಹಳ್ಳಿಯವರ ಸಾಧನೆ ಕಡಿಮೆಯದ್ದಲ್ಲ. ಇವರು ನಿರ್ದೇಶಿಸಿದ ಎಂಟು ದೈನಂದಿನ ಧಾರಾವಾಹಿಗಳು ಮಧ್ಯಮ ವರ್ಗದ ಬದುಕಿನ ತಾಕಲಾಟಗಳನ್ನು ಪ್ರತಿಬಿಂಬಿಸಿದವು. ಮುಖ್ಯವಾಗಿ ಇವರ ‘ವಠಾರ’ ಧಾರಾವಾಹಿಯು ಕನ್ನಡ ಕಿರುತೆರೆ ಇತಿಹಾಸದಲ್ಲೇ ಮೊದಲ ಬಾರಿಗೆ 1001 ಸಂಚಿಕೆಗಳ ದಾಖಲೆ ಸೃಷ್ಟಿಸಿದ್ದಲ್ಲದೆ, ಸಾವಿರಾರು ಹೊಸ ಕಲಾವಿದರಿಗೆ ಬದುಕಿನ ದಾರಿ ತೋರಿಸಿತು. ಕಸ್ತೂರಿ ವಾಹಿನಿಗಾಗಿ ಸಮಾಜದ ಪ್ರಮುಖರೊಂದಿಗೆ ನಡೆಸಿದ ‘ನಡೆ–ನುಡಿ’ ಕಾರ್ಯಕ್ರಮ ಹಾಗೂ ಸಮಾಜದ ಕಟು ಸತ್ಯಗಳ ಜಿಜ್ಞಾಸೆಗಳನ್ನೊಳಗೊಂಡ ‘ಇದೇ ಸತ್ಯ’ ಚರ್ಚಾ ಕಾರ್ಯಕ್ರಮಗಳು ಬೌದ್ಧಿಕ ವಲಯದಲ್ಲಿ ತೀವ್ರ ಸಂಚಲನ ಮೂಡಿಸಿದವು. ಜೀ ಕನ್ನಡ ವಾಹಿನಿಯಲ್ಲಿ ಪ್ರಸಾರಗೊಂಡ ‘ನಿತ್ಯೋತ್ಸವ’ ಧಾರಾವಾಹಿಯೂ ಹೊಸತನದಿಂದ ಕೂಡಿತ್ತು.

**ಸಾಮಾಜಿಕ ಬದ್ಧತೆ ಮತ್ತು ಸಂಸ್ಥೆಗಳು: ಸಮಾಜಮುಖಿ ಪ್ರಯೋಗಗಳು**

ನಾಗತಿಹಳ್ಳಿಯವರು ಕೇವಲ ಸಾಹಿತ್ಯ ಅಥವಾ ಸಿನಿಮಾದ ಸೃಜನಶೀಲತೆಗೆ ಸೀಮಿತವಾಗದೆ, ಸಮಾಜವನ್ನು ಸುಧಾರಿಸುವ ನಿಟ್ಟಿನಲ್ಲಿ ಸಾಂಸ್ಕೃತಿಕ ವೇದಿಕೆಗಳನ್ನು ಕಟ್ಟಿ ಬೆಳೆಸಿದ್ದಾರೆ.

**ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ**

ಮೈಸೂರಿನಲ್ಲಿ 1985 ಆಗಸ್ಟ್ 15 ರಂದು ಸಮಾನ ಆಲೋಚನೆಯ ಗೆಳೆಯರೊಂದಿಗೆ ನಾಗತಿಹಳ್ಳಿಯವರು ಆರಂಭಿಸಿದ ಸಾಂಸ್ಕೃತಿಕ ಸಂಘಟನೆ ‘ಅಭಿವ್ಯಕ್ತಿ’. ಕಾಲು ಶತಮಾನಕ್ಕೂ ಹೆಚ್ಚು ಕಾಲದಿಂದ ನಿರಂತರ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿರುವ ಈ ಸಂಸ್ಥೆಯು ಇದುವರೆಗೆ ಹಲವು ಹೊರನಾಡು ಕನ್ನಡಿಗರ ಕೃತಿಗಳು ಸೇರಿದಂತೆ 48 ಪ್ರಮುಖ ಕೃತಿಗಳನ್ನು ಪ್ರಕಟಿಸಿದೆ. ಕೇವಲ ಸಾಹಿತ್ಯಕ್ಕೆ ಸೀಮಿತವಾಗದೆ, ಈ ವೇದಿಕೆಯ ವತಿಯಿಂದ ವೈಚಾರಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದರ ಜೊತೆಗೆ, ಸಮಾಜದಲ್ಲಿ ಆರೋಗ್ಯಕರ ಚಿಂತನೆ ಬಿತ್ತಲು ಅಂತರ್ಜಾತೀಯ ಮತ್ತು ಅಂತರ್ಧರ್ಮೀಯ ವಿವಾಹಗಳನ್ನು ನಿರಂತರವಾಗಿ ನಡೆಸಿಕೊಂಡು ಬರಲಾಗುತ್ತಿದೆ.

### ಟೆಂಟ್ ಸಿನಿಮಾ (Tent Cinema) ಮತ್ತು ಚಿತ್ರಕಥಾ ಶಿಬಿರ

ಸಿನಿಮಾ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವ ಯುವ ಪ್ರತಿಭೆಗಳಿಗಾಗಿ 2008 ರಿಂದ ನಿರಂತರವಾಗಿ 50 ಅರ್ಹ ಜನರನ್ನು ಆಯ್ಕೆ ಮಾಡಿ ರಾಜ್ಯಮಟ್ಟದ 'ಚಿತ್ರ ಕಥಾ ರಚನಾ ಶಿಬಿರಗಳನ್ನು' ನಾಗತಿಹಳ್ಳಿ, ಮೈಸೂರು ಮತ್ತು ಬೆಂಗಳೂರುಗಳಲ್ಲಿ ಯಶಸ್ವಿಯಾಗಿ ನಡೆಸಿದರು. ಈ ಯಶಸ್ಸಿನ ಮುಂದಿನ ಭಾಗವಾಗಿ 2013 ರಲ್ಲಿ ಬೆಂಗಳೂರಿನಲ್ಲಿ 'ಟೆಂಟ್ ಸಿನಿಮಾ' (Tent Cinema) ಹೆಸರಿನಲ್ಲಿ ಪೂರ್ಣ ಪ್ರಮಾಣದ ಸಿನಿಮಾ ಶಾಲೆಯನ್ನು ಆರಂಭಿಸಿದರು. ಚಿತ್ರಕಥೆ ರಚನೆ, ಛಾಯಾಗ್ರಹಣ, ಸಂಕಲನ ಹಾಗೂ ನಿರ್ದೇಶನ ಕುರಿತಂತೆ ಚಿತ್ರರಂಗದ ಹೆಸರಾಂತ ತಂತ್ರಜ್ಞರಿಂದ ಇಲ್ಲಿ ತರಬೇತಿ ನೀಡಲಾಗುತ್ತಿದ್ದು, ಇಲ್ಲಿ ಕಲಿತ ನೂರಾರು ಯುವಕರು ಇಂದು ಚಿತ್ರರಂಗದಲ್ಲಿ ಸಕ್ರಿಯರಾಗಿದ್ದಾರೆ.

### ಗ್ರಾಮಮುಖಿ ಚಳವಳಿ: 'ನಾಗತಿಹಳ್ಳಿ ಸಂಸ್ಕೃತಿ ಹಬ್ಬ' ಮತ್ತು ಕೃಷಿ ಕ್ರಾಂತಿ

ಕನ್ನಡ ಚಿತ್ರರಂಗದ ಉನ್ನತ ಶಿಖರದಲ್ಲಿದ್ದರೂ, ಗಾಂಧಿನಗರದ ಚೌಕಟ್ಟಿನಲ್ಲಿ ಕಳೆದುಹೋಗದೆ ಗಾಂಧಿ ಮಾರ್ಗದಲ್ಲಿ ಹಳ್ಳಿಯ ಕಡೆಗೆ ನಡೆದವರು ನಾಗತಿಹಳ್ಳಿಯವರು. "ಗ್ರಾಮ ಬದುಕಿಗೆ ಚಿಂತನೆ, ಚಿಕಿತ್ಸೆ, ಚೈತನ್ಯ" ಎಂಬ ಉದಾತ್ತ ಆಶಯದೊಂದಿಗೆ 2004 ರಿಂದ ತಮ್ಮ ಹುಟ್ಟೂರಾದ ಮಂಡ್ಯ ಜಿಲ್ಲೆಯ ನಾಗತಿಹಳ್ಳಿಯಲ್ಲಿ ಸುತ್ತಮುತ್ತಲಿನ ಹತ್ತೂರು ಗ್ರಾಮಸ್ಥರು, ಯುವಕ ಮಂಡಳಿಗಳು ಮತ್ತು ಮಹಿಳಾ ಸಂಘಟನೆಗಳ ಒಕ್ಕೂಟದೊಂದಿಗೆ ನಡೆಸಿಕೊಂಡು ಬರುತ್ತಿರುವ 'ಸಂಸ್ಕೃತಿ ಹಬ್ಬ' ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲೇ ಒಂದು ದಾಖಲೆ.

"ನಮ್ಮ ದೇಶದ ಬೇರುಗಳಂತಿರುವ ಹಳ್ಳಿಗಳು ಯಾವುದೋ ಮೌಢ್ಯ, ತಲ್ಲಣ, ನಿಷ್ಕ್ರಿಯತೆ, ಬಡತನಗಳಂತಹ ಸಾಂಸ್ಕೃತಿಕ ದಾರಿದ್ರ್ಯಗಳಿಂದ ಬಳಲುತ್ತಿವೆ. ಅಲ್ಲಿ ಹೊಸ ಆಲೋಚನೆಗಳ ಮೂಲಕ ಚೈತನ್ಯವನ್ನು ಚಿಮ್ಮಿಸಲು ಸಾಂಸ್ಕೃತಿಕ ಸೆಲೆಗಳನ್ನು ಸೃಷ್ಟಿಸಲು ಸಾಧ್ಯವೇ ಎಂಬ ಪುಟ್ಟ ಪ್ರಯತ್ನ ಇದು" ಎನ್ನುತ್ತಾರೆ ನಾಗತಿಹಳ್ಳಿ. ತಾನು ಸಮಾಜದಿಂದ ಪಡೆದಿದ್ದನ್ನು ಮರಳಿ ನೀಡುವ ವಿನಮ್ರತೆಯಿಂದ ಅವರು ನಾಗತಿಹಳ್ಳಿಯ ಸರ್ಕಾರಿ ಶಾಲೆಗೆ ಸುಸಜ್ಜಿತ ಗ್ರಂಥಾಲಯ, ಕಂಪ್ಯೂಟರ್ ಕೇಂದ್ರ ಹಾಗೂ ಬಯಲು ರಂಗಮಂದಿರವನ್ನು ನಿರ್ಮಿಸಿಕೊಟ್ಟಿದ್ದಾರೆ.

### ಹಬ್ಬದ ಬಹುಮುಖಿ ಕಾರ್ಯಕ್ರಮಗಳು

ಪ್ರತಿ ವರ್ಷ ಹಳ್ಳಿಯ ಜನರ ಬೌದ್ಧಿಕ ಹಾಗೂ ಆರ್ಥಿಕ ಸ್ವಾವಲಂಬನೆಗಾಗಿ ಈ ಕೆಳಗಿನ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ:

- ಗ್ರಾಮೀಣ ಕ್ರೀಡೆಗಳು ಮತ್ತು ರಾಸು ಪ್ರದರ್ಶನ.
- ಕೃಷಿ ಉಪನ್ಯಾಸಗಳು ಮತ್ತು ಉಚಿತ ವೈದ್ಯಕೀಯ ಶಿಬಿರಗಳು.
- ಕವಿಗೋಷ್ಠಿ, ನಾಟಕೋತ್ಸವ, ಚಲನಚಿತ್ರೋತ್ಸವ, ಯಕ್ಷಗಾನ ಮತ್ತು ಪುಸ್ತಕ

ಪ್ರದರ್ಶನ.

- ಮಕ್ಕಳಿಗಾಗಿ ವಿಶೇಷ ಶಿಬಿರಗಳನ್ನು ಏರ್ಪಡಿಸಿ ಜನಪದ ಗೀತೆಗಳ ಕಲಿಕೆ, ಮಣ್ಣಿನ ಕಲಾಕೃತಿ ರಚನೆ, ಚಿತ್ರಕಲೆ ಮತ್ತು ರಂಗಶಿಕ್ಷಣದ ಮೂಲಕ ಅವರಲ್ಲಿ ಸೃಜನಶೀಲತೆಯನ್ನು ಬೆಳೆಸಲಾಗುತ್ತಿದೆ.

**ರೈತರಿಗಾಗಿ ಕೃಷಿ ಅಧ್ಯಯನ ಪ್ರವಾಸ**

ನಾಗತಿಹಳ್ಳಿ ಹಾಗೂ ಸುತ್ತಲಿನ ರೈತರಿಗೆ ಆಧುನಿಕ ಬೇಸಾಯದ ಕ್ರಮಗಳನ್ನು ಪರಿಚಯಿಸಲು ಪ್ರತಿವರ್ಷ 'ರೈತರು ಹಾಗೂ ರೈತ ಮಹಿಳೆಯರನ್ನು' ಸ್ವತಃ ಪ್ರವಾಸಕ್ಕೆ ಕರೆದೊಯ್ಯುವ ವಿಶಿಷ್ಟ ಯೋಜನೆಯನ್ನು ಇವರು ರೂಪಿಸಿದ್ದಾರೆ. ಮೈಸೂರು, ಚಾಮರಾಜನಗರ, ಹೆಗ್ಗಡದೇವನಕೋಟೆ ಸೇರಿದಂತೆ ಇಡೀ ಉತ್ತರ ಕರ್ನಾಟಕ ಮತ್ತು ಕರಾವಳಿ ಪ್ರಾಂತ್ಯಗಳಿಗೆ ಭೇಟಿ ನೀಡಿ ಕೃಷಿ ಪಂಡಿತರ ಮಾರ್ಗದರ್ಶನ ಕೊಡಿಸಲಾಗಿದೆ. ತೆಂಗಿನ ಬೆಳೆಯ ಆಧುನಿಕ ತಂತ್ರಜ್ಞಾನ ತಿಳಿಯಲು 2011 ರಲ್ಲಿ ಕೇರಳಕ್ಕೂ, ಆಧುನಿಕ ಕೃಷಿ ವಿಧಾನಗಳಿಗಾಗಿ 2012 ರಲ್ಲಿ ಪಂಜಾಬ್ ರಾಜ್ಯಕ್ಕೂ ಹಾಗೂ 2018 ರಲ್ಲಿ ಅಂಡಮಾನ್‌ಗೂ ರೈತ ಪ್ರವಾಸ ಕೈಗೊಳ್ಳಲಾಗಿತ್ತು. ರೈತರ ಆರ್ಥಿಕ ಸ್ವಾವಲಂಬನೆಗಾಗಿ ನಾಗತಿಹಳ್ಳಿಯಲ್ಲಿ 'ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ' ಸ್ಥಾಪಿಸಲಾಗಿದ್ದು, ಮುಂದಿನ ದಿನಗಳಲ್ಲಿ ರೈತರ ಸಹಕಾರಿ ಬ್ಯಾಂಕ್ ಸ್ಥಾಪಿಸುವ ದೊಡ್ಡ ಆಶಯ ಇವರಿಗಿದೆ.

**ರಂಗಭೂಮಿ ಚಟುವಟಿಕೆಗಳು ಮತ್ತು 'ಕರಿಭಂಟ' ನಾಟಕ**

ಸಂಸ್ಕೃತಿ ಹಬ್ಬದ ಅಂಗವಾಗಿ ಪ್ರತಿ ದಿನ ರಾತ್ರಿ ನಾಡಿನ ಖ್ಯಾತ ರಂಗತಂಡಗಳಿಂದ ನಾಟಕ ಪ್ರದರ್ಶನ ಇರುತ್ತದೆ. ಹಳ್ಳಿಯ ಯುವಕರಿಗೆ ತರಬೇತಿ ನೀಡಿ 'ನಮ್ಮೂರ ಗಾಂಧಿ', 'ಇಗೋ ಪಂಜರ ಅಗೋ ಮುಗಿಲು', 'ಅಂಗಿಬಟ್ಟೆ', 'ಹಳ್ಳಿಚಿತ್ರ' ಮತ್ತು 'ಧನ್ವಂತರಿ ಚಿಕಿತ್ಸೆ' ನಾಟಕಗಳನ್ನು ನಾಡಿನಾದ್ಯಂತ ಪ್ರದರ್ಶಿಸಲಾಗಿದೆ.

ಇದರಲ್ಲೇ ಅತ್ಯಂತ ರೋಚಕ ಸಂಗತಿಯೆಂದರೆ, ರಂಗಭೂಮಿಯ ಯಾವುದೇ ಪೂರ್ವ ಅನುಭವವಿಲ್ಲದ ಅಭಿವ್ಯಕ್ತಿ ಮಹಿಳಾ ಸಂಘಟನೆಯ ಅಪ್ಪಟ ಹಳ್ಳಿಯ ರೈತ ಮಹಿಳೆಯರು ರಂಗಪ್ರವೇಶ ಮಾಡಿ ಅಭಿನಯಿಸಿದ 'ಕರಿಭಂಟ' ನಾಟಕ. ಈ ನಾಟಕವು ದೆಹಲಿಯ ಕರ್ನಾಟಕ ಸಂಘದ ಪ್ರದರ್ಶನವೂ ಸೇರಿದಂತೆ ರಾಜ್ಯಾದ್ಯಂತ 25ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಾಣುವ ಮೂಲಕ ಕನ್ನಡ ರಂಗಭೂಮಿಯ ಇತಿಹಾಸದಲ್ಲೇ ಸುವರ್ಣಾಕ್ಷರಗಳಲ್ಲಿ ದಾಖಲಾಗುವಂತಹ ಕ್ರಾಂತಿ ಮಾಡಿತು. ಇದರೊಂದಿಗೆ ಹಳ್ಳಿಯ ಮಕ್ಕಳಿಗೆ ರಂಗತರಬೇತಿ ನೀಡಿ 'ದೇವರ ಆಟ', 'ಹುಲಿ ಬಂತು ಹುಲಿ', 'ಪಂಚತಂತ್ರ', 'ನಮ್ಮೂರ ಮಕ್ಕಳು', 'ಬದುಕು ಬದಲಾಯಿಸಬಹುದು' ಮತ್ತು 'ಇಡ್ಲಿ ಮಾದಮ್ಮ' ನಾಟಕಗಳ ರಂಗಪ್ರಯೋಗಗಳನ್ನು ಮಾಡಿಸಲಾಗಿದೆ. 2013ರಲ್ಲಿ ಅಂತರ್ಜಾತೀಯ ವಿವಾಹಿತರ ಸಮ್ಮೇಳನ ಹಾಗೂ 2014ರಲ್ಲಿ ಕೃಷಿ ಬದುಕಿನ ಸುಧಾರಣೆಯ ವಿಷಯದೊಂದಿಗೆ ನಡೆದ ಹಬ್ಬಗಳು ಮಾದರಿಯಾಗಿದ್ದು,

ಮುಂದಿನ ಹಬ್ಬಗಳ ಸಿದ್ಧತೆಗಳು ನಿರಂತರವಾಗಿ ಸಾಗುತ್ತಿರುತ್ತವೆ.

ನಾಗತಿಹಳ್ಳಿ ಚಂದ್ರಶೇಖರ್ ಅವರು ಸಾಹಿತ್ಯದ ಘನತೆ ಮತ್ತು ಚಲನಚಿತ್ರದ ತಾಂತ್ರಿಕ ದೃಶ್ಯ ಮಾಧ್ಯಮವನ್ನು ಯಶಸ್ವಿಯಾಗಿ ಸಮ್ಮಿಲನಗೊಳಿಸಿದ ಅಪರೂಪದ ಸಾಂಸ್ಕೃತಿಕ ಕೊಂಡಿ. ಕೀರ್ತಿಯ ಶಿಖರದಲ್ಲಿದ್ದೂ ತಾಯ್ನೆಲದ ಬೇರುಗಳನ್ನು ಮರೆಯದ, ಅಕ್ಷರ ಮತ್ತು ದೃಶ್ಯ ಮಾಧ್ಯಮಗಳೆರಡರಲ್ಲೂ ಸಮಾಜದ ತಳಮಳಗಳಿಗೆ ದನಿಯಾದ ಇವರ ಜೀವನದ ನಡೆ ಅನನ್ಯವಾದುದು. ಸಾಹಿತ್ಯ, ಸಿನಿಮಾ ಮತ್ತು ಗ್ರಾಮಮುಖಿ ಚಟುವಟಿಕೆಗಳಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡಿರುವ ನಾಗತಿಹಳ್ಳಿ ಚಂದ್ರಶೇಖರ್ ಅವರು ನಮ್ಮ ಕಾಲದ ಅನೇಕ ತರುಣ–ತರುಣಿಯರ ಸೃಜನಶೀಲ ಬದುಕಿಗೆ ಮತ್ತು ಪ್ರಗತಿಪರ ಆಲೋಚನೆಗಳಿಗೆ ನಿಜವಾದ ದಿಕ್ಸೂಚಿಯಾಗಿದ್ದಾರೆ.